## ಪ್ರಬಂಧ



ಚಿತ್ರ: ಫಕ್ರುದ್ದೀನ್ ಎಚ್.

ವನವನ್ನೆಲ್ಲ ತಿನ್ನೆಂದ ಕೃಷ್ಣನ ಸಲಹೆಗೆ ಉರಿ ನಾಲಗೆ ಚಾಚಿದ್ದಾನೆ ಅಗ್ನಿ. ಸುಡುವ ತನ್ನ ವನವನ್ನು ಕಂಡ ಇಂದ್ರನಿಗೂ ಉರಿದಿದೆ. ವರುಣನಿಗೆ ತಣ್ಣಗಾಗಿಸಲು ಆಜ್ಞೆ. ಕಿಡಿಗೇಡಿ ಕಿಟ್ಟಪ್ಪನೆಲ್ಲಿ ಬಿಡುತ್ತಾನೆ. ಬೀಳುವ ಮಳೆಗೇ ಬಾಣದ ಬವಣೆ ನೋಡಿ, ಅರ್ಜುನ ಬಿಟ್ಟ ಬಾಣಗಳ ಛತ್ತು ಮಳೆಗೆ ದಿಗ್ಬಂಧನ ಹಾಕಿದೆ. ಉರಿವ ಎದೆ ತಣ್ಣಗಾಗಿಸಿಕೊಂಡ ಅರ್ಜುನನಿಗೆ ಅಗ್ನಿಯು, ಗಾಂಡೀವ ಎಂಬ ಅಕ್ಷಯಬತ್ತಳಿಕೆ ಕೊಟ್ಟನಂತೆ. ಹೀಗೆ ಒಮ್ಮೊಮ್ಮೆ ಲೋಕವೇ ದಹಿಸುತ್ತಿದ್ದರೂ ನಂದಿಸಲಾಗದ ಅಸಹಾಯಕತೆ ಮಳೆಗೆ. ಯಾರ ಕೈಗೂ ಸಿಗದ ಮಳೆಗೂ ತ್ರಿಶಂಕು ಸ್ಥಿತಿ. ಅಂದ ಮೇಲೆ ನನ್ನಂತಹ ಸಾಮಾನ್ಯಳ ಪಾಡೇನು ಬಿಡಿ. ಮೇಲೂ ಇಲ್ಲ, ಕೆಳಗೂ ಇಲ್ಲ. ಬಾಗಿದ್ದೊಂದೇ ಬಂತು. ಒಮ್ಮೊಮ್ಮೆ ಮಳೆಯೂ ಮಾನವರಾಡಿಸುವ ಬುಗುರಿ. ಚಾಟಿ ಆ ಅವತಾರಿ ಕೈಯಲ್ಲಿ. ಹೀಗೆ ಮಳೆ ಮಣಿತವೇ ಮಣಿತ. ಕವಿಗೂ ಮಣಿಯುತ್ತೆ, ಸಂಗೀತಕ್ಕೂ ಒಲಿಯುತ್ತೆ. ಗುರ್ಜಿ ಬಂದರೆ ತಿರುಗುತ್ತೆ. ಥೇಟ್ ಸೂರ್ಯನ ಸುತ್ತ ಸುತ್ತುವ ಭೂಮಿಯಂತೆ ಭೂಮಿಯ ಸುತ್ತ ಈ ಮಳೆಯ ಕಥೆ.

ಕಥೆ ಎಂದಾಕ್ಷಣ ನೆನಪಾಗಿದ್ದು ಮಳೆಯಾಗಿ ಕಣ್ಣೀರು ಹರಿಸಿದ ಕಥೆಯೊಂದು ನಮ್ಮಜ್ಜಿ ಹೇಳಿದ್ದು. ಉತ್ತರೆ ಎಂಬುವಳು ನೀರು ತರಲು ಅರಗಿನ ಬಾವಿಗೆ ಹೋದಳಂತೆ. ನೀರು ಹೊತ್ತವಳ ನಡಿಗೆ ತಡವಾಗಿದೆ. ಅತ್ತೆಯಂದಿರಿಗೆ ಇಷ್ಟು ಸಾಕಲ್ಲವೇ?. ಮೊಸರಲ್ಲೂ ಕಲ್ಲು. ನೆರಿಗೆ ಮುದ್ದೆಯಾಗಿದೆ. ಕೂದಲೇತಕೆ ಕೆದರಿದೆ. ಬೆಂಡೋಲೆ ಏಕೆ ಸೊಟ್ಟಾಗಿದೆ... ಎನ್ನುತ್ತಾ ಅನುಮಾನಿಸಿದ್ದಾಳೆ. ಶಂಕೆಗೆ ಸೀತೆಯೇ ಕಾಡುಪಾಲಾದಳು. ಇನ್ನೂ ಉತ್ತರೆ? ತಡಬಡಿಸಿದ್ದಾಳೆ. ಬೇವಿನಕಾಯಿ ಚಟ್ನಿ ಮಾಡಿ ಗಂಡನಿಗೆ ಊಟಕ್ಕಿಟ್ಟರೆ ನಂಬುವೆ ಎನ್ನುತ್ತಾಳೆ. ಬೇವಿನ ಕಾಯಿ ಕಹಿ. ಒಲವಿನ ಹೆಂಡತಿ ಮುಂದೆ ಸಿಹಿಯಿದೆ ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾನೆ ಗಂಡ. ಆದರೆ ಕಹಿ ಮನದ ಅತ್ತೆಯ ದೆಸೆಯಿಂದ ಉತ್ತರೆಗೆ ಕತ್ತಲೆ ಪಯಣ, ತೊಟ್ಟಿಲ ಹೊತ್ತುಕೊಂಡು ಬಂದವಳು. ತೊಟ್ಟಿಲಲಾಡುವ